# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–3982/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 01/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಶಿವನಾಯಕ ಎಂ. ಪಾಟೀಲ್, ಹೊಸೂರು ಗ್ರಾಮ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತಿತರರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ಶಿವನಾಯಕ ಎಂ. ಪಾಟೀಲ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಶ್ರೀ ಕೆಂಚನಾಯ್ಕ ಮಲ್ಲನಾಯಕ ಪಾಟೀಲ್, ಶ್ರೀ ಸೋಮಪ್ಪ ಬಸಪ್ಪ ಇಂಗಳಗಿ, ಶ್ರೀ ಗುರುಲಿಂಗಪ್ಪ ವೀರಪ್ಪ ಇಂಗಳಗಿ, ಶ್ರೀ ಚಂದ್ರಶೇಖರ್ ವೀರಪ್ಪ ಇಂಗಳಗಿ ಹಾಗು ಶ್ರೀ ಮಲ್ಲೇಶ್ ನಾಗಪ್ಪ ಇವರುಗಳಿಗೆ ಜಮೀನಿದ್ದು, ಸದರಿಯವರುಗಳ ಜಮೀನುಗಳಲ್ಲಿ ಹಾಗೂ ಸುತ್ತಮುತ್ತಲು ಸುಮಾರು 35–40 ವರ್ಷ ಹಳೆಯದಾದ ವಿದ್ಯುತ್ ಕಂಬಗಳು ಹಾಗೂ ತಂತಿ ಇರುತ್ತದೆ. ಇದರಿಂದ, ಹೆಸ್ಕಾಂ ಸಂಸ್ಥೆಯವರಿಗೆ ಸದರಿ ಹಳೇ ಕಂಬಗಳನ್ನು ಹಾಗೂ ತಂತಿಗಳನ್ನು ತೆಗೆದು ವಿದ್ಯುತ್ ಸಂಪರ್ಕದ ದುರಸ್ಥಿ ಕಾರ್ಯ ಮಾಡುವಂತೆ ಇಲಾಖೆಯನ್ನು ಹಲವಾರು ಬಾರಿ ವಿನಂತಿಸಿದ್ದರೂ, ಹೆಸ್ಕಾಂ ಸಂಸ್ಥೆಯವರು ಯಾವುದೇ ಕ್ರಮ ಜರುಗಿಸದ ಕಾರಣ ದಿ:20/10/2015 ರಂದು ವಿದ್ಯುತ್ ಸಂಪರ್ಕದಲ್ಲಿ ಉಂಟಾದ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ವಿದ್ಯುತ್ ಅವಘಡ ಸಂಭವಿಸಿ ಮೇಲೆ ಹೇಳಿದವರ ಜಮೀನುಗಳಲ್ಲಿ ಬೆಂಕಿಯು ಕಬ್ಬಿನ ಬೆಳೆಗೆ ತಾಗಿ ಕಬ್ಬಿನ ಬೆಳೆ ಸುಟ್ಟು ಹೋಗಿರುತ್ತದೆ. ಇದರಿಂದ ಪ್ರತಿಯೊಬ್ಬರಿಗೂ 1 ಎಕರೆಗೆ ರೂ.1.40 ಲಕ್ಷದಿಂದ ರೂ.1.60 ಲಕ್ಷದವರೆಗೆ ನಷ್ಟ ಉಂಟಾಗಿರುತ್ತದೆ ಎಂದು, ಇದಲ್ಲದೇ ಸುಟ್ಟ ಕಬ್ಬನ್ನು 24 ಗಂಟೆಗಳ ನಂತರ ಯಾರು ತೆಗೆದುಕೊಳ್ಳುವುದಿಲ್ಲ. ಈ ಅವಘಡಕ್ಕೆ ಮತ್ತು ಉಂಟಾಗಿರುವ ನಷ್ಟಕ್ಕೆ ಹೆಸ್ಕಾಂ ಸಂಸ್ಥೆಯವರೆ ಕಾರಣರೆಂದು ತಿಳಿಸಿರುತ್ತಾರೆ. ಇದಲ್ಲದೇ, ಹೆಸ್ಕಾಂ ಸಂಸ್ಥೆಯಲ್ಲಿ ಮೇಲಿಂದ ಮೇಲೆ ಅಧಿಕಾರಿಗಳ ವರ್ಗಾವಣೆಯಾಗುತ್ತಿದ್ದು, ರೈತರ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕದ ಅನುಮತಿಗೆ ಹಾಗೂ ಸುಟ್ಟು ಹೋದ ಪರಿವರ್ತಕವನ್ನು (ಟ್ರಾನ್ಸ್‌ಫಾರ್ಮರ್) ಬದಲಾಯಿಸಲು ರೈತರಿಂದ ರೂ.10,000/– ದಿಂದ ರೂ.15,000/– ವರೆಗೆ ಹಣ ವಸೂಲಿ ಮಾಡಿರುತ್ತಾರೆ. ಈ ರೀತಿಯ ಹಣ ವಸೂಲಿ ನಿಲ್ಲಬೇಕು, ಆದ್ದರಿಂದ, ಎದುರುದಾರರ ವಿರುದ್ದ ಕ್ರಮ ಜರುಗಿಸಿ ತಮ್ಮಗಳಿಗೆ ಸೂಕ್ತ ಪರಿಹಾರ

ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರಾದ ಕಾರ್ಯನಿರ್ವಾಹಕ ಅಭಿಯಂತರರು (ವಿ) (ಹೆಚ್‌ಆರ್‌ಡಿ & ಐಟಿಸಿ) ರವರು ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಸ್ವೀಕರಿಸಿದ್ದು, ಅದರಲ್ಲಿ ದೂರಿನ ಅಂಶಗಳ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಪ್ರಕರಣದ ದೂರುದಾರರಿಗೆ ಹಾಗೂ ಈ ಕಛೇರಿಗೆ ವರದಿ ಸಲ್ಲಿಸಲು ತಿಳಿಸಿರುತ್ತಾರೆ. ನಂತರ ಕಾರ್ಯನಿರ್ವಾಹಕ ಅಭಿಯಂತರರು (ವಿ) ಕಾ ಮತ್ತು ಪಾ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರಿಂದ ವರದಿ ಬಾರದೆ ಇದ್ದ ಕಾರಣ, ನೆನಪೋಲೆಯನ್ನು ನೀಡಲಾಗಿದ್ದು, ಸದರಿಯವರು ಫ್ಯಾಕ್ಸ್ ಮುಖೇನ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಶ್ರೀ ಶಿವನಾಯಕ, ಶ್ರೀ ಸೋಮಪ್ಪ, ಶ್ರೀ ಗುರುಲಿಂಗಪ್ಪ, ಶ್ರೀ ಚಂದ್ರಶೇಖರ ಮತ್ತು ಶ್ರೀ ಮಲ್ಲೇಶಪ್ಪ ಇವರುಗಳ ಜಮೀನಿನಲ್ಲಿ ಕಬ್ಬಿನ ಬೆಳೆಗೆ ಸಂಭವಿಸಿದ ಅಗ್ನಿ ಅವಘಡಕ್ಕೆ ಸಂಬಂಧಪಟ್ಟಂತೆ ನಿಯಮಾನುಸಾರ ತಮ್ಮ ಕಛೇರಿಯ ಪತ್ರದ ಮೂಲಕ ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಲಾಗಿದೆ ಎಂದು ಇದಲ್ಲದೇ ದೂರುದಾರರು ಮತ್ತು ಮೇಲೆ ಹೇಳಿದ ಇತರೆ ಜಮೀನುದಾರರುಗಳು ವಕೀಲರಿಂದ ನೋಟೀಸ್‌ನ್ನು ತಮಗೆ ನೀಡಿದ್ದು, ಸದರಿ ನೋಟೀಸ್‌ಗೆ ತಮ್ಮ ಸಂಸ್ಥೆಯಿಂದ ವಕೀಲರ ಮೂಲಕ ಸೂಕ್ತ ಉತ್ತರವನ್ನು ನೀಡಲಾಗಿರುತ್ತದೆ. ಮೇಲೆ ಹೇಳಿದಂತಹ ಅವಘಡಗಳಿಗೆ ಪರಿಹಾರ ನೀಡುವ ಅಧಿಕಾರ ತಮ್ಮ ವಿಭಾಗಕ್ಕೆ ಇರುವುದಿಲ್ಲವೆಂದು, ತಾವು ಸೂಕ್ತ ಪರಿಹಾರಕ್ಕಾಗಿ ದೂರುದಾರರಿಗೆ ಸಂಬಂಧಿಸಿದಂತೆ ಮೇಲಧಿಕಾರಿಗಳಿಗೆ ಸಲ್ಲಿಸಿ, ಮೇಲಧಿಕಾರಿಗಳಿಂದ ಜಾರಿಗೊಳಿಸಲು ನೀಡುವ ನಿರ್ದೇಶನಗಳನ್ನು ಆಧರಿಸಿ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಪ್ಯಾಕ್ಸ್ ಪ್ರತಿಯನ್ನು ಹಾಜರುಪಡಿಸಲಾಗಿದೆ. ಇದನ್ನು ದಿ: 19/09/2016 ರಂದು ನೀಡಲಾಗಿರುತ್ತದೆ. ನಂತರ ಸದರಿಯವರಿಂದ ಯಾವುದೇ ವರದಿ ಬಾರದ ಕಾರಣ ದಿ:3/10/2016 ರಂದು ಅಧೀಕ್ಷಕ ಅಭಿಯಂತರರು, ಹೆಸ್ಕಾಂ, ಕಾರ್ಯ ಮತ್ತು ಪಾಲನೆ ವೃತ್ತ, ನೆಹರು ನಗರ, ಬೆಳಗಾವಿ ಇವರಿಗೆ ನೆನಪೋಲೆಯನ್ನು ನೀಡಲಾಗಿದ್ದು, ಸದರಿ ಅಧೀಕ್ಷಕ ಅಭಿಯಂತರರು ಇವರು ಕಾರ್ಯನಿರ್ವಾಹಕ ಅಭಿಯಂತರರು, ಕಾ ಮತ್ತು ಪಾ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರಿಗೆ ಬರೆದ ಪತ್ರದ ಪ್ರತಿಯನ್ನು ಸ್ವೀಕರಿಸಲಾಗಿದ್ದು, ಸದರಿ ಪತ್ರದಲ್ಲಿ "ಕೇವಲ ಅಪಘಾತದ ವರದಿ ಕಳುಹಿಸಿದರೆ ಪರಿಹಾರ ಮಂಜೂರು ಮಾಡಲು ಬರುವುದಿಲ್ಲ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ವಿದ್ಯುತ್ ಪರಿವೀಕ್ಷಕರ ತಪಾಸಣಾ ವರದಿಯನ್ನು ಪಡೆದು ನಿಗಮದ ಸುತ್ತೋಲೆ ಸಂಖ್ಯೆ:

ಹುವಿಸ.ಕಂ/ಪ್ರ.ವ್ಯ/ಇಇ–3/ಎಇ–1/ಎಸಿಸಿ/07–08 ದಿ: 05/07/2007 ರಲ್ಲಿ ನಮೂದಿಸಿರುವ ದಾಖಲೆ, ಪತ್ರಗಳನ್ನು ಪಡೆದು, ಸದರಿ ದಾಖಲೆಗಳನ್ವಯ ನಿಗಮ ಕಛೇರಿ ಸುತ್ತೋಲೆಯಲ್ಲಿ ತಿಳಿಸಿರುವ ಪ್ರಕಾರ ಪರಿಹಾರ ಎಷ್ಟು ನೀಡಬೇಕೆಂಬುದರ ಬಗ್ಗೆ ಮೌಲ್ಯಮಾಪನ ಮಾಡಿ ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ ಇವರಿಂದ ಪರಿಶೀಲನೆ ಮಾಡಿಸಿ ಪರಿಹಾರ ಮಂಜೂರಾತಿಗಾಗಿ ಕೂಡಲೆ ಸಲ್ಲಿಸಲು ಸೂಚಿಸಲಾಗಿದೆ ಎಂದು ತಿಳಿಸಿರುವುದು ಕಂಡು ಬರುತ್ತದೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಸುತ್ತೋಲೆ ಪ್ರತಿಯನ್ನು ಹಾಜರುಪಡಿಸಲಾಗಿದೆ. ನಂತರ ಅಧೀಕ್ಷಕ ಅಭಿಯಂತರರಿಂದಾಗಲೀ ಅಥವಾ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರಿಂದಾಗಲೀ ಯಾವುದೇ ವರದಿ ಬಂದಿರುವುದಿಲ್ಲ.

3. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ವರದಿಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರ ಮತ್ತು ಇತರೆ ಐದು ಜನ ರೈತರ ಬೆಳೆಯು ವಿದ್ಯುತ್ ಅವಘಡದಿಂದ ದಿ:20/10/2015 ರಂದು ಸುಟ್ಟು ಹೋಗಿರುವುದು ಕಂಡು ಬರುತ್ತದೆ. ಈ ಬಗ್ಗೆ ಮನವಿಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರ್ ರವರಿಗೆ, ಬೈಲಹೊಂಗಲದ ಹೆಸ್ಕಾಂ ಸಂಸ್ಥೆಗೆ ಸಲ್ಲಿಸಿರುವುದು ಕಂಡು ಬರುತ್ತದೆ. ಬೈಲಹೊಂಗಲ, ಹೆಸ್ಕಾಂ ಸಂಸ್ಥೆಗೆ ದಿ:21/10/2015 ರಂದು ಮನವಿ ಸಲ್ಲಿಸಿರುವುದು ಕಂಡು ಬರುತ್ತದೆ. ಸದರಿ ಮನವಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಮನವಿ ಪತ್ರ ಸಲ್ಲಿಸಿದ ನಂತರವು ಬೈಲಹೊಂಗಲ ಹೆಸ್ಕಾಂ ಸಂಸ್ಥೆ ವತಿಯಿಂದ ಮೇಲೆ ಹೇಳಿದ ಹೆಸ್ಕಾಂ ಸಂಸ್ಥೆಯ ಸುತ್ತೋಲೆ ಪ್ರಕಾರ ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ವಿಭಾಗ ಇವರಾಗಲೀ ಅಥವಾ ಹೆಸ್ಕಾಂ ಸಂಸ್ಥೆಯ ಬೈಲಹೊಂಗಲ ವಿಭಾಗದ ಇತರೆಯಾವುದೇ ಅಧಿಕಾರಿಯಾಗಲೀ ಇದರ ಬಗ್ಗೆ ಕ್ರಮ ಜರುಗಿಸಿರುವುದು ಕಂಡು ಬರುವುದಿಲ್ಲ. ದೂರುದಾರರು ಈ ಸಂಸ್ಥೆಗೆ ದೂರನ್ನು ಸಲ್ಲಿಸಿ, ನಂತರ ಕಾರ್ಯನಿರ್ವಾಹಕ ಅಭಿಯಂತರರು (ವಿ) (ಹೆಚ್ಆರ್‌ಡಿ & ಐಟಿಸಿ) ಇವರು ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರಿಗೆ ದಿ:30/04/2016ರ ಪತ್ರವನ್ನು ಬರೆದ ನಂತರ ಕಾರ್ಯನಿರ್ವಾಹಕ ಅಭಿಯಂತರರು, ಕಾ ಮತ್ತು ಪಾ ವಿಭಾಗ, ಹೆಸ್ಕಾಂ, ಬೈಲಹೊಂಗಲು ಇವರು ಕಾರ್ಯಪ್ರವೃತ್ತರಾಗಿರುತ್ತಾರೆ. ಅಲ್ಲಿಯವರೆಗೂ ಸದರಿ ದೂರುದಾರರ ಮನವಿಯ ಮೇರೆಗೆ ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ. ಆದರೆ ದಿ:19/09/2016ರ ಪತ್ರದ ಮುಖೇನ ವಿದ್ಯುತ್ ಅವಘಡಗಳಿಂದ ಉಂಟಾದ ಪ್ರಕರಣಗಳಲ್ಲಿ ಪರಿಹಾರ ನೀಡುವ ಅಧಿಕಾರವು ವಿಭಾಗಕ್ಕೆ ಇಲ್ಲದೇ ಇರುವುದರಿಂದ, ಹೆಸ್ಕಾಂ ಸಂಸ್ಥೆಯ ನಿಯಮಗಳ ಪ್ರಕಾರ ಅಪಘಾತದ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಿ ಜಾರಿಗೊಳಿಸಲಾದ ನಿರ್ದೇಶನಗಳನ್ನು ಆಧರಿಸಿ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಇದಾದ ನಂತರ ದಿ:07/10/2016 ರಂದು ಅಧೀಕ್ಷಕ

ಅಭಿಯಂತರರು, ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಬೆಳಗಾವಿ ಇವರು ಕಾರ್ಯನಿರ್ವಾಹಕ ಅಭಿಯಂತರರು (ವಿ) ಕಾ ಮತ್ತು ಪ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಈ ಕಛೇರಿಗೆ ರವಾನಿಸಿದ್ದು, ಸದರಿ ಪತ್ರದಲ್ಲಿ ಕೇವಲ ಅಪಘಾತದ ವರದಿ ಕಳುಹಿಸಿದರೆ ಪರಿಹಾರ ಮಂಜೂರು ಮಾಡಲು ಬರುವುದಿಲ್ಲ. ತಮ್ಮ ಪತ್ರದೊಡನೆ ಅಡಕ ಮಾಡಿರುವ ಸುತ್ತೋಲೆಯ ನಿರ್ದೇಶನಗಳನ್ನು ಪಾಲಿಸಿ ವರದಿ ಸಲ್ಲಿಸುವಂತೆ ತಿಳಿಸಿರುವುದು ಕಂಡು ಬರುತ್ತದೆ. ಇದರಿಂದ ಕಾರ್ಯನಿರ್ವಾಹಕ ಅಭಿಯಂತರರು, ಕಾ ಮತ್ತು ಪಾ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರು ಸುತ್ತೋಲೆಯ ನಿರ್ದೇಶನಗಳನ್ನು ಪಾಲಿಸದೇ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಿರುವುದು ಸ್ಪಷ್ಟ ಪಡುತ್ತದೆ. ನಂತರ ಕಾರ್ಯನಿರ್ವಾಹಕ ಅಭಿಯಂತರರು, ಕಾ ಮತ್ತು ಪಾ ವಿಭಾಗ, ಹೆಸ್ಕಾಂ, ಬೈಲಹೊಂಗಲ ಇವರು ಕೈಗೊಂಡ ಕ್ರಮದ ಬಗ್ಗೆ ಯಾವುದೇ ವರದಿಯನ್ನು ಸಲ್ಲಿಸದೇ ಇದ್ದಾಗ, ದಿನಾಂಕ 14/11/2016 ರಂದು 26/12/2016 ರಂದು ಅಧೀಕ್ಷಕ ಅಭಿಯಂತರರು, ಕಾ ಮತ್ತು ಪಾ ವೃತ್ತ, ಹುಬ್ಬಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ನೆಹರು ನಗರ, ಬೆಳಗಾವಿ ಇವರಿಗೆ ಪತ್ರ ಬರೆದು ವರದಿ ಸಲ್ಲಿಸದೆ ಇರುವ ಬಗ್ಗೆ ಗಮನಕ್ಕೆ ತರಲಾಗಿದ್ದು, ಆದರೆ, ಇದುವರೆಗೂ ಸದರಿ ರೈತರುಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮದ ಬಗ್ಗೆ ಯಾವುದೇ ವರದಿ ಈ ಕಛೇರಿಗೆ ಬಂದಿರುವುದಿಲ್ಲ.

4. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದ ಮೇಲೆ ಹೇಳಿದ ರೈತರ ಹೊಲದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸಂಭವಿಸಿದ ಅಗ್ನಿ ಅವಘಡದಿಂದ ಉಂಟಾದ ಕಬ್ಬಿನ ಬೆಳೆ ನಷ್ಟಕ್ಕೆ ಹೆಸ್ಕಾಂ ಸಂಸ್ಥೆಯವರಿಂದ ಸೂಕ್ತ ಪರಿಹಾರವನ್ನು ತಕ್ಷಣವೇ ವಿತರಿಸುವ ನಿಟ್ಟನಿಲ್ಲಿ ಕಾನೂನು ರೀತ್ಯ ಸೂಕ್ತ ಕ್ರಮ ಕೈಗೊಂಡು ಪರಿಹಾರಧನವನ್ನು ಮೇಲೆ ಹೇಳಿದ ನೊಂದ ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda 1/3

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 1/3/17